ಎ) ಒದಗಿಸಲಾಗಿದೆ.

ಶಿಗ್ಗಾಂವ ತಾಲ್ಲೂಕು, ಶಹಾಬಜಾರ, ಅಂಕದಕಣ ಹಾಗೂ ಕೊಟ್ಟಗೇರಿ ರೆವೆನ್ಯೂ ಗ್ರಾಮಗಳನ್ನು ಸೇರಿಸಿ ಬಂಕಾಪುರ ಅಂತ ತಿದ್ದುಪಡಿ ಮಾಡುವ ಬಗ್ಗೆ.

1147- ಶ್ರೀ ಮಂಜುನಾಥ್ ಸಿ. ಕುನ್ನೂರ, (ಶಿಗ್ಗಾಂವ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲ್ಲೂಕು ಶಹಾಬಜಾರ, ಅಂಕದಕಣ, ಕೊಟ್ಟಿಗೇರಿ, ಗ್ರಾಮಗಳ ಜನಸಂಖ್ಯೆ ಎಷ್ಟು?

ಆ) ಸದರಿ ಗ್ರಾಮಗಳನ್ನು ಸೇರಿಸಿ ಬಂಕಾಪುರ ಗ್ರಾಮವೆಂದು ಮಾಡಲು ಸರ್ಕಾರಕ್ಕೆ ಅರ್ಜಿ ಸಲ್ಲಿಸಲಾಗಿದೆಯೇ?

ಇ) ಈ ಬಗ್ಗೆ ಮಾನ್ಯ ಉಚ್ಚ-ನ್ಯಾಯಾಲಯದಿಂದ ಯಾವುದಾದರೂ ಆದೇಶ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರದವರು ತೆಗೆದು ಕೊಂಡ ಕ್ರಮಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು)

ಅ)

1.	ಶಹಾಬಜಾರ ಗ್ರಾಮ	9,038
2.	ಅಂಕದಕಣ ಗ್ರಾಮ	3,953
3.	ಕೊಟ್ಟಿಗೇರಿ ಗ್ರಾಮ	2,038
	ಒಟ್ಟು	**15,029**

ಆ) ಹೌದು.

ಇ) ಇಲ್ಲ.

ಈ) ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಕರೆದು ಪ್ರಾಥಮಿಕ ಅಧಿಸೂಚನೆಗಳನ್ನು ಈಗಾಗಲೇ ಹೊರಡಿಸಲಾಗಿದೆ.

ಕೈಮಗ್ಗ ನೇಕಾರರ ಮತ್ತು ಬಾಲ ಕಾರ್ಮಿಕರ ಸಮಸ್ಯೆ

228 ಎ - ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ನಿಗಧಿ ಮಾಡಲು ಸರ್ಕಾರವು ಕ್ರಮ ತೆಗೆದುಕೊಂಡಿದೆಯೇ? ನಿಗಧಿಪಡಿಸಲು ಸರ್ಕಾರ ಅನುಸರಿಸುತ್ತಿರುವ ಮಾನ-ದಂಡವೇನು?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) ಹೌದು.

ಕನಿಷ್ಠ ವೇತನ ಕಾಯ್ದೆ 1948 ಕಲಂ 3(1ಎ) ರನ್ವಯ ಯಾವುದೇ ಉದ್ಧಿಮೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದಲ್ಲಿ 1000ಕ್ಕಿಂತ ಕಡಿಮೆಯಾಗದಷ್ಟು ಕಾರ್ಮಿಕರು ಇರಬೇಕಾಗುತ್ತದೆ. ಅಂತಹ ಉದ್ಧಿಮೆಗಳನ್ನು ಕನಿಷ್ಠ ವೇತನ ಕಾಯ್ದೆ ಸೆಕ್ಷನ್ 27ರನ್ವಯ ಕಾಯ್ದೆಯಡಿಯಲ್ಲಿ ತರಲಾಗುತ್ತದೆ.

ಕನಿಷ್ಟ ವೇತನ ಕಾನೂನು 1948ರ ಪ್ರಕಾರ ಕನಿಷ್ಟ ವೇತನವನ್ನು ನಿಗದಿ ಮಾಡಲು 61 ಉದ್ದಿಮೆಗಳನ್ನು ಆ ಕಾನೂನಿನ ಅನುಸೂಚಿಗೆ ಸೇರಿಸಲಾಗಿದೆ. ಮತ್ತು ಅವುಗಳಲ್ಲಿ 38 ಉದ್ದಿಮೆಗಳಿಗೆ ಈಗಾಗಲೇ ಕನಿಷ್ಟ ವೇತನವನ್ನು ನಿಗದಿ ಮಾಡುವ ಕ್ರಮವನ್ನು ತೆಗೆದುಕೊಂಡು ಕರಡು ಉದ್ದಿಮೆಗಳಿಗೆ ಅಂತಿಮ ಅಧಿಸೂಚನೆಯನ್ನು ಅವಶ್ಯಕ ಅಧಿಸೂಚನೆಯನ್ನು ಅವಶ್ಯಕ ವಿಧಿವಿಧಾನಗಳನ್ನು ಪಾಲಿಸಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯದಲ್ಲಿ ಬಾಲ ಕಾರ್ಮಿಕರ ಸಮಸ್ಯೆ

228 ಬಿ - ಶ್ರೀ ಬಿ.ವಿ. ರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು ಬಾಲ ಕಾರ್ಮಿಕರ ಸಂಖ್ಯೆ ಎಷ್ಟು? ಬಾಲ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿ ಕೊಳ್ಳುವವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳು ಏನು?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) 1981ರಲ್ಲಿ ಜನಗಣತಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 11.17 ಲಕ್ಷ ಬಾಲ ಕಾರ್ಮಿಕರು ಇದ್ದಾರೆ. 1991ರ ಜನಗಣತಿ ಸಂಖ್ಯೆ ಇನ್ನೂ ಪ್ರಕಟವಾಗಿಲ್ಲ. ಈ ಸಂಖ್ಯೆಯು ಸುಮಾರು 13 ಲಕ್ಷಗಳಿರಬಹುದು.

ಬಾಲ ಕಾರ್ಮಿಕರ ಸಮಸ್ಯೆ ಒಂದು ಸಾಮಾಜಿಕ, ಆರ್ಥಿಕ ಸಮಸ್ಯೆಯಾಗಿದ್ದು, ನಿಯಮಗಳನ್ನು ಜಾರಿಗೊಳಿಸುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳುವ ಪರಿಪಾಠವನ್ನು ನಿರ್ಮೂಲನೆ ಮಾಡಲು ಹಂತ ಹಂತವಾಗಿ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ. 1994ನೇ ಇಸವಿಯಲ್ಲಿ ಮಕ್ಕಳ ಸಮಗ್ರ ಅಭಿವೃದ್ಧಿಯ ಕೆಲಸಗಳನ್ನು ಮಾಡುವ ಸರ್ಕಾರದ ಇಲಾಖೆಯು ಹಾಗೂ ಸ್ವಯಂಸೇವಾ ಸಂಸ್ಥೆಗಳು ಒಳಗೊಂಡಂತೆ ಕೇಂದ್ರ ಸ್ಥಾನಗಳಲ್ಲಿ ಕಾರ್ಯಗಾರಿಗಳನ್ನು ನಡೆಸಿ ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಅದೇ ರೀತಿ 1994ನೇ ಇಸವಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಬಾಲ ಕಾರ್ಮಿಕರನ್ನು ಹೊಂದಿರಬಹುದಾದ ಉದ್ಯಮದ ಆಡಳಿತವರ್ಗದವರನ್ನು ಒಳಗೊಂಡಂತೆ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ 20 ಜನಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸಿ ಸಾರ್ವಜನಿಕರಲ್ಲಿ ಅಭಿಪ್ರಾಯ ಮೂಡಿಸಲು ಪ್ರಯತ್ನಿಸಿದೆ. ಬಾಲ